
REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 12 | ISSUE - 5 | FEBRUARY - 2023

# ಗಿರಿಜಾ ಕಂಡ ಸಿನಿಮಾ

ಡಾ. ಹನುಮಂತಪ್ಪ ಸಂಜೀವಣ್ಣನವರ
ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.



ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಕಾಲಘಟ್ಟವು ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ನವಸಮಾಜದ ಸಿದ್ಧಾಂತದಿಂದ ಸಾರುವ ಮನೋಸ್ಥಿತಿಯಿಂದ ಕಣ್ಣು ತೆರೆಸಿದ ಸಂದರ್ಭ, ಹೋರಾಟದ ಜೀವನವನ್ನು ಸಾಗಿಸಲು ಸ್ಪೂರ್ತಿ ತುಂಬುವ, ನೈಜ ಸಮಾಜವಾದ ಕ್ರೌರ್ಯದ ಚಿತ್ರಣವನ್ನು ಅನಾವರಣಗೊಳಿಸಿದೆ. ಬಡ ಶ್ರೀಮಂತರ ನಡುವೆ ಇರುವ ಕಂದರವನ್ನು ಎಳೆಎಳೆಯಾಗಿ ಬಿಚ್ಚಿಡುತ್ತದೆ. ಕಾರ್ಮಿಕರ ಮೇಲೆ ನಿರಂತರ ಬಂಡವಾಳ ಶಾಹಿಗಳ ದೌರ್ಜನ್ಯ ದೇಶದಲ್ಲಿ ಜಗಜ್ಜಾಹಿರವಾಗಿ ನಡೆಯುತ್ತಿತ್ತು. ಇವರ ಸಮಸ್ಯೆಗಳಿಗೆ ಸ್ಪಂದಿಸುವ ಇವರ ಮೇಲಾಗುವ ದಬ್ಬಾಳಿಕೆಗಳನ್ನು ಹೊರಹಾಕಲು ನಡೆದ ಚಳುವಳಿಯಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿಯಾಗಿ ರೂಪಗೊಂದಿದೆ. ಈ ಪ್ರಮುಖ ವಿಚಾರಗಳ ಸಾಹಿತಿಗಳನ್ನು ಕಾಣಬಹುದಾಗಿದೆ. ಅನಕೃ, ನಿರಂಜನ, ಬಸವರಾಜ ಕಟ್ಟಿಮನಿ, ತರಾಸು, ಲಂಕೇಶ ಮುಂತಾದವರಾಗಿದ್ದಾರೆ. ಈ ಕಾಲಘಟ್ಟದಲ್ಲಿ ಸಾಹಿತ್ಯ ಸೇವೆಯನ್ನು ಮಾಡಿರುವ ಇಂತಹ ಹಲವು ಸಾಹಿತಿಗಳನ್ನು ನೋಡಬಹುದು.

ಕಟ್ಟಿಮನಿಯವರ ಪ್ರಗತಿಶೀಲ ಧೋರಣೆಗಳನ್ನುನಪರಿಚಯಿಸುವ ಅತ್ಯಂತ ಅದ್ಬುತ್ ಕಥೆಗಳಲ್ಲಿ ಒಂದಾದ 'ಗಿರೀಜಾ ಕಂಡ ಸಿನಿಮಾ' ಮುಖ್ಯವಾಗಿದೆ. ಒಂದು ಬಡ ಕುಟುಂಬ ಶ್ರೀಮಂತ ಕುಟುಂಬದ ಸಾಮಾಜಿಕ, ಆರ್ಥಿಕ ವ್ಯವಸ್ಥೆಯನ್ನು ಅನಾವರಣಗೊಳಿಸುತ್ತಾರೆ. ಬಸವರಾಜ ಕಟ್ಟಿಮನಿಯವರು, 'ದೇಹದಲ್ಲಿ ಶಕ್ತಿ ಇರುವ ತನಕ ಬರೆಯುತ್ತೇನೆ, ಉಸಿರು ನಿಂತಾಗ ಮಾತ್ರ ಬರವಣಿಗೆ ನಿಲ್ಲುತ್ತದೆ' ಎನ್ನುವ ಆಗಾದ ನಂಬಿಕೆಯನ್ನು ಇಟ್ಟುಕೊಂಡಿದ್ದರು.

ಸಿದ್ಧರಾಮ ಮತ್ತು ಗಿರೀಜಾ ಬಡಕುಟುಂಬದ ದಂಪತಿಗಳು. ದೇವಮ್ಮ ಇವರ ಗಂಡ ಸುಪರ್‌ವೈಸರ್ ಶ್ರೀಮಂತ ಕುಟುಂಬದ ದಂಪತಿಯಾಗಿ ಗೋಚರವಾಗುತ್ತಾರೆ. ಜಾಗತೀಕ ಎರಡನೆ ಮಹಾಯುದ್ಧದ ಸಂದರ್ಭವನ್ನು ನೆನಪಿಸುವ ಕಥೆಗಾರ ಸಾಮಾಜಿಕ ಜೀವನದ ಮೇಲೆ ಆಗುವ ದುಷ್ಪರಿಣಾಮಗಳನ್ನು ವಿವರಿಸುತ್ತಾನೆ. ಯುದ್ಧವೊಂದು ಮುಗಿದರೂ ದಿನಂಪ್ರತಿ ನಡೆಯುವ ಬದುಕಿನ ಯುದ್ಧವನ್ನು ಹೆಂಡ್ತಿಗೆ ಪರಿಚಯಿಸುತ್ತಾರೆ. ಆ ಯುದ್ಧ ಮುಗಿದರೂ, ನಮ್ಮಲ್ಲಿ "ಬಡವರ ಯುದ್ಧ!ಕೂಲಿಕಾರರ ಯುದ್ಧ! ರೈತರ ಯುದ್ಧ! ಈ ಯುದ್ಧ ನಡೆಯುವುದು ಹೊಟ್ಟೆಗಾಗಿ! ಅನ್ನಕ್ಕಾಗಿ! ಒಂದು ಮುದ್ದೆ ಮುದ್ದಿಗಾಗಿ! ಒಂದು ತಟ್ಟೆ ಎಸರಿಗಾಗಿ! ಸಾವಿರಾರು ಬಡಪಾಯಿಗಳು ಎಲ್ಲಿ ಈ ಕಾಡುಗೂಡಿನಲ್ಲಿ ಹೊಟ್ಟೆಯ ಹೋರಾಟ ನಡೆಸಿದ್ದಾರಲ್ಲಿ ಗಿರೀಜಾ! ಅವರ ಕೂಳಿನ ಕೂಗು ನನ್ನನ್ನು ಹುಚ್ಚನನ್ನಾಗಿ ಮಾಡಿದೆ" (ಪುಟ 33) ಬಡವರ ಬದುಕಿನ ಭವಣೆಯನ್ನು ನೆನೆಯುತ್ತ ಇದನ್ನು ಕೊನೆಗಾಣಿಸುವವರೆಗೂ ಹೋರಾಟ ನನ್ನ ಗುರಿ ಎಂದು ಪ್ರತಿಜ್ಞೆ ಗೈಯ್ಯುತ್ತಾನೆ.

ಸಿನಿಮಾ ನೋಡಲು ಹೊರಟ ಸಂದರ್ಭದಲ್ಲಿ ಅವಳ ಉತ್ಸಾಹಕ್ಕೆ ಎಲ್ಲೆಯೇ ಇಲ್ಲ. ಕಾರಣ ಹಲವು ಭಾನುವಾರಗಳು ಕಳೆದು ವರ್ಷಗಳು ಉರಳಿದರು ಸಿನಿಮಾ ನೋಡುವ ಭಾಗ್ಯ ಇಂದು ದೊರಕಿದೆ. ಹೀಗಾಗಿ ಅವಳಿಗೆ ಆಕಾಶವೇ ಮೂರೇ ಗೇಣು ಎಂಬಂತಾಗಿದೆ.

"ಒಲೆಯ ಮೇಲೆ ಅನ್ನ ಕುದಿಯುತ್ತಿದ್ದ ಹಾಗೆ ಸಬಕಾರ ಹಚ್ಚಿ ಮುಖ ತೊಳೆದುಕೊಂಡಳು. ಜಡೆಹಾಕಿ ಟೇಪು ಕಟ್ಟಿಕೊಂಡಳು. ರಾತ್ರಿ ನೀರಿನಲ್ಲಿ ತೋಯಿಸಿ ಬಟ್ಟೆಯಲ್ಲಿ ಕಟ್ಟಿಟ್ಟಿದ್ದ ಕೆಂಪು ಹೂ ಮುಡಿದುಕೊಂಡಳು, ಕುಂಕುಮ ಇಟ್ಟುಕೊಂಡಳು. ಟ್ರಂಕನಲ್ಲಿದ್ದ ನಾಲ್ಕು ಸೀರೆಗಳನ್ನು ಹೊರತೆಗೆದುಯಾವುದುಡುವುದು ಎಂದು ಹದಿನೈದು ನಿಮಿಷ ಯೋಚಿಸಿದಳು. 'ರೀ ಯಾವುದನ್ನುಟ್ಟುಕೊಳ್ಳಲಿ ಹೇಳಿ' ಎಂದು ಪತಿಯ ಸಲಹೆಯನ್ನು ಕೇಳಿದಳು', ಇವಳ ಸಡಗರಕ್ಕೆ, ಸಂತೋಷಕ್ಕೆ ತನ್ನ

ಬಯಕೆಯಈಡೇರಿಕೆಗೆ ಆತುರ ಪಡುತ್ತಾಳೆ. ಸಿದ್ದರಾಮನ ಸಿದ್ಧತೆಗೆ ಇಷ್ಟೊಂದು ವಸ್ತುಗಳು ಬೇಕೆ! "ಅಂಗಿತೊಟ್ಟು, ಪಂಜೆ ಉಟ್ಟು ಹೊರಡಲು ಇಂಥ ಸಿದ್ಧತೆ?" ಇವನದು.

ಅವಳ ಸಡಗರವನ್ನು ಕೌತುಕದಿಂದ ನೋಡುತ್ತಿದ್ದಾನೆ ಕೊಠಡಿಯಲ್ಲಿ ಕುಳಿತು. ಇನ್ನೂ ಮುಗಿದಿಲ್ಲ ಅವಳ ಶೃಂಗಾರ. "ಮೂರನಾಲ್ಕು ಸಲ ಕನ್ನಡಿಯಲ್ಲಿ ಹೌದು ಅರ್ಧ ಒಡೆದ ಕನ್ನಡಿಯಲ್ಲಿ ಮುಖ ನೋಡಿಕೊಂಡು ಕೆನ್ನೆ ಉಜ್ಜಿಕೊಂಡು ಕುರುಳು ತಿದ್ದಿಕೊಂಡು, ಹುಬ್ಬು ತಿಡಿಕೊಂಡು, ಮೂಗು ಒರೆಸಿಕೊಂಡು ಸಿದ್ಧತೆ ಮಾಡಿಕೊಳ್ಳುವವಳು. ಇದನ್ನೆಲ್ಲವನ್ನು ಗಮನಿಸಿದ ಸಿದ್ದರಾಮನಿಗೆ ಒಳಗೊಳಗೆ ನಗು ಬರುತ್ತಿತ್ತು. ದೇವಮ್ಮಳು ಅಂದೇ ಸಿನಿಮಾಕ್ಕೆ ಹೋಗಲು ತಯಾರಾಗಿದ್ದಾರೆ. ಅವಳ ಅಲಂಕಾರವನ್ನು ಸೊಗಸಾಗಿ ಕಥೆಯಲ್ಲಿ ಮೂಡಿಬಂದಿದೆ. "ಭಾರಿ ಬೆಲೆಯ ರೇಷ್ಮೆ ರವಿಕೆ ತೊಟ್ಟಿದ್ದಾಳೆ. ಕಿವಿಯಲ್ಲಿ ಕೆಂಪಿನ ಲೋಲಾಕಿ ಇಟ್ಟಿದ್ದಾಳೆ. ಕತ್ತಿನಲ್ಲಿ ಚಿನ್ನದ ಹಾರ ಹಾಕಿ ಕೈಗಳಲ್ಲಿ ಚಿನ್ನದ ಬಳೆತೊಟ್ಟಿದ್ದಾಳೆ. ಬೆರಳಿಗೆ ರತ್ನದುಂಗುರುಗಳಿವೆ. ಕಾಲಿಗೆ ಹೊಳಪಿನ ಷೂಸು" ಇವೆಲ್ಲವುಗಳನ್ನು ಗಿರೀಜಾಗೆ ನೋಡಲಾದರು ಸಿಗುತ್ತದೆಯೇ.

ಗಂಡ ಸುಪರ್‌ವೈರಸ್ ಮಹಾಶಯನು ಸೂಟು–ಬೂಟು ತನ್ನ ಶರಟು ಪಂಜೆ" ಹೀಗೆ ಸಮಕಾಲೀನ ಸಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆ ತಾಂಡವವಾಡುವುದನ್ನು ಮಾರ್ಮಿಕವಾಗಿ ವಿವರಿಸುತ್ತಾರೆ. ನಗರದ ಸಾಮಾಜಿಕ ಜೀವನ ವ್ಯವಸ್ಥೆಯನ್ನು ನಾಲ್ಕು ಐದು ದೃಶ್ಯಗಳಲ್ಲಿ ಅನಾವರಣಗೊಳಿಸುವ ವಿಚಾರಕ್ಕೆ ಕೈಹಾಕುತ್ತಾರೆ. ಬೆಂಗಳೂರು ನಗರ ನಿಲ್ದಾಣದಿಂದ ನಡೆದುಕೊಂಡು ಬರುವ ಸಂದರ್ಭದಲ್ಲಿ "ಓಡಾಡುತ್ತಿದ್ದವರಲ್ಲಿ ಅನೇಕರು ಬೇಕಂತಲೇ ಅವಳ ಮೈಗೆ ಮೈ ತಗಲಿಸಿಕೊಂಡು ಹೋಗುತ್ತಿದ್ದರು. ಮುಗ್ಧ ಗಿರೀಜಾ ಸಿದ್ದರಾಮನನ್ನು ಕೇಳುತ್ತಾಳೆ, 'ಸದ್ಯಾಕೆ ಹೀಗೆಲ್ಲಾ ತಟ್ಟಿಕೊಂಡು ಹೋಗುತ್ತಾರೆ ಇವರು? ಎಂದು, "ಇದು ಬೆಂಗಳೂರಿನ ಫ್ಯಾಶನ್ ಗಿರೀಜಾ! ಬಡವರನ್ನು ಕಂಡರೆ ಎಲ್ಲ ಹೀಗೆ ನಾವು ನೋಡ ಹೊರಟಿರುವ ಸಿನಿಮಾದಲ್ಲಿ ಮೊದಲನೇ ದೃಶ್ಯ ಇದು!" ಎಂದು ಸಿದ್ದರಾಮ ಉತ್ತರಿಸುತ್ತಾನೆ. ಅವಳಿಗೆ ಫ್ಯಾಶನ್ ಗೊತ್ತಿಲ್ಲ. ಮತ್ತೊಂದು ಇಲ್ಲಿ ಮಾನ ಮರ್‍ವಾದೆ ಬಿಟ್ಟು ಹೀಗೆ ನಡಕೊಳ್ಳುವುದೇ ಫ್ಯಾಶನ್‌ನೇನು' ಎನ್ನುವಂತೆ ವ್ಯಕ್ತ ಪಡಿಸುತ್ತಾಳೆ.

ಬೆಂಗಳೂರಿನ ದೊಡ್ಡಲಾಲ್‌ಬಾಗ್, ಚಿಕ್ಕಲಾಲ್‌ಬಾಗ್ ಪ್ರವಾಸಿಗರನ್ನು ಸೆಳೆಯುವ ಸ್ಥಳಗಳಲ್ಲಿ ಸ್ಥಾನಪಡೆದಿವೆ. ಅವುಗಳಲ್ಲಿ ಚಿಕ್ಕ ಲಾಲ್‌ಬಾಗ್ ನಿರಾಶ್ರಿತ ಬಡವರು, ಅನಾಥರಿಗೆ, ಬಿಕ್ಷುಕರಿಗೆ, ವೃದ್ಧರಿಗೆ ಅಶ್ರಯ ತಾಣವಾಗಿ ಹೆಸರು ಪಡೆದಿದೆ. ದೊಡ್ಡವರಿಗೆ (ಶ್ರೀಮಂತರಿಗೆ) ದೊಡ್ಡಾಲಾಲ್‌ಬಾಗ್, ಚಿಕ್ಕವರಿಗೆ (ಬಡವರಿಗೆ) ಚಿಕ್ಕಲಾಲ್‌ಬಾಗೆಂದು ಸಿದ್ದರಾಮ ಹೆಂಡ್ತಿಗೆ ವಿವರಿಸುತ್ತಾನೆ.

ಕುಳಿತು ಸುತ್ತಲು ವೀಕ್ಷಿಸುತ್ತಿರುವಾಗ ಈ ದೇಶದ ಸ್ಥಿತಿಯನ್ನು ಗಿರೀಜಾನ ಗಮನಕ್ಕೆ ತರುತ್ತಾನೆ. "ಅದೋ ಆ ಗಿಡದ ಕೆಳಗೆ ಒಬ್ಬ ಹೆಂಗಸು ಬಿದ್ದುಕೊಂಡಿದ್ದಾಳೆ ಕಾಣಿಸುತ್ತೆ ತಾನೆ ನಿನಗೆ!, ಹೌದಲ್ರಿ! ಪಾಪ! ಹಾಗೆ ಯಾಕೆ ಬಿದ್ದುಕೊಂಡಿದ್ದಾಳೋ? ಹತ್ತಿರ ಇರೋವು ಆ ನಾಲ್ಕು ಪಿಳ್ಳೆಗಳು ಮಕ್ಕಳು ಅಂತಾ ಕಾಣುತ್ತೆ! ಮಕ್ಕಳೇ! ಇನ್ನಾರಿದ್ಯಾರು! ನೋಡು. ಆಕೇಯು ನಮ್ಮ ಹಾಗೆ ಮನುಷ್ಯಳೇ, ನಿನ್ನ ಹಾಗೆ ಹೆಂಗಸೇ, ಮಾನ ಮರ್ಯಾದೆ ಎಲ್ಲಾ ಮರೆತುಬಿಟ್ಟು ಒಬ್ಬಳೇ ಈ ಮಕ್ಕಳನ್ನ ಕಟ್ಟಿಕೊಂಡು ಈ ತೋಟಕ್ಕೆ ಬಂದು ಈ ರೀತಿ ಬಿದ್ದಕ್ಕೋ ಬೇಕಾದರೆ ಅವಳಿಗೆ ಯಾವ ಗತಿ ಬಂದದೀತು? ಅವಳಿಗೆ ಈ ಸ್ಥತಿ ಬರಲು ಕಾರಣ ಏನು? ಅನ್ನೋ ವಿಚಾರ ನಮಗೆ ಬರಬೇಡವೆ?" ಬಡ ಹೆಣ್ಣುಮಕ್ಕಳ ಸ್ಥಿತಿ ಮತ್ತು ಮಕ್ಕಳು ಪ್ರಾಣಿಗಳಿಗಿಂತಲೂ ಕೀಳಾಗಿ ಬದುಕುವ ಪರಿಸ್ಥಿತಿಯನ್ನು ಲೇಖಕರು ಸಿದ್ದರಾಮನ ಮೂಲಕ ಹೇಲಿಸಿ ಬೇಸರ ವ್ಯಕ್ತಪಡಿಸುತ್ತಾರೆ. ಸಿನೆಮಾದ ಎರಡನೆ ದೃಶ್ಯವಿದು ಎನ್ನುತ್ತಾರೆ.

ಹರಿದು ಹೋದ ಪಂಜೆಯೊಂದನ್ನು ಮೊಳಕಾಲಿನವರೆಗೆ ಸುತ್ತಿಕೊಂಡು ಹೊಲಸು ಅಂಗಿಯೊಂದನ್ನು ತೊಡ್ಡಿದ್ದಾನೆ. ತಲೆಗೊಂದು ಚಿಂದಿ ಬಟ್ಟೆ, ಮುಖದ ಮೇಲೆ ಬೆಳೆದು ನಿಂತ ಬಿಳಿಯ ಗಡ್ಡ ಮೀಸೆ. ಮೊದತಿ ಕಳಹೀನಬಾರ. ಆ ಮುಖ ಬಿಸಿಲಿನಲ್ಲಿ ಸುತ್ತಿ ಸುತ್ತಿ ಇನ್ನೂ ಕಂದಿಹೋಗಿದೆ. 'ಕಳ್ಳೆಕಾಯಿ! ಕಳ್ಳೆಕಾಯಿ ಎಂಥ ಕುಗ್ಗಿದ ದನಿ ಅದು" ಬಡವರ ಭಾರತವನ್ನು ಕಣ್ಮುಟ್ಟುವಂತೆ ವಿವರಿಸುತ್ತಾರೆ. ಮನೆಯಲ್ಲಿದ್ದು ವಿಶ್ರಾಂತಿ ಪಡೆದಕೊಳ್ಳುವ ಕಾಲದಲ್ಲಿ ಈ ಬಡಕಲು ದೇಹದ ಹಣ್ಣುಹಣ್ಣಾದ ಮುದುಕ ಇನ್ನೂ ಎಪ್ಪತ್ತಾದರು ದುಡಿದು ತಿನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವಯಸ್ಸಿನ ಅದೇಷ್ಟು ಶ್ರೀಮಂತರು ಬಿಸಿಲು ಕಾಣದೆ ಎ.ಸಿ. ರೂಮಿನಲ್ಲಿ ಕಾಲಕಳೆಯುವ ಹೊತ್ತಿನಲ್ಲಿ ಈ ಬಡವರ ಸ್ಥಿತಿ ಕರುಣಾಜನಕವಾಗಿ ಗೋಷರಿಸುತ್ತದೆ. ಇದು ಮೂರನೇ ದೃಶ್ಯ.

ಚಿತ್ರ ಮಂದಿರದ ಮುಂದೆ ನಡೆಯುವ ಬ್ಲಾಕ್ ಟಿಕೇಟ್ ಮಾರಾಟದ ಕಾಳಸಂತೆಯ ದೃಶ್ಯವನ್ನು ಕಡೆಯಲ್ಲಿ ತರುತ್ತಾರೆ. "ಬಡ ಕೂಲಿಕಾರನೊಬ್ಬನನ್ನು ನಾಲ್ಕು ಜನ ಸೇರಿ ಹೊಡೆಯುತ್ತಿರುವುದು ಕಾಣಿಸಿತು. ಇಲ್ಲಿ ನಿಂತಿರು ಗಿರೀಜಾ! ಪಾಪ! ಅವನ್ಯಾಕೆ ಹೊಡೆಯುತ್ತಿದ್ದಾರೊ ನೋಡ್ತೆನೆ" ಎಂದು ಹೇಳಿ ಸಿದ್ದರಾಮ ಗಲಾಟೆ ನಡೆದಿದ್ದಲ್ಲಿಗೆ ಹೋದ. ಬಡಸಾಯಿ ಅಳುತ್ತಲೆ ಹೇಳಿದ, "ಐದಾಣಿಯ ಒಂದು ಟಿಕೆಟ್ ಎಂಟಾಣೆಗೆ ಕೊಡ್ತಿನಿ ಅಂದರು ನನ್ನ ಹತ್ತಿರ ಇದ್ದಿದ್ದೂ ಅಷ್ಟೇ. ಕೊಟ್ಟುಬಿಟ್ಟೆ. ಈಗ ಟಿಕೇಟು ಕೋಡಲೊಲ್ಲರು. ದುಡ್ಡಾದರೂ ವಾಪಸ್ ಮಾಡಿರೆಂದರೆ ಅದನ್ನೂ ಕೊಡಲೊಲ್ಲರು" ಈ ಅನ್ಯಾಯವನ್ನು ಕೇಳಿ ಪೋಲಿಸರಿಗೆ ಕಂಪ್ಲೆಂಟ್ ಕೊಡ್ತೆನೆ ಎಂದು ಸಿಟ್ಟಿನಿಂದ ಹೇಳಿದಾಗ ಪೋಲಿಸರು ಇವರ ಜೊತೆ ಸಾಮಿಲಾದ ಸಂಗತಿಯನ್ನು ಅರಿತು ಮೊಸ ವಂಚನೆಯ ಜಗತ್ತನ್ನು, ಪರಿಚಯವನ್ನು ಮಾಡಿಕೊಳ್ಳುತ್ತಾನೆ. ಕಾನೂನಿಂದ ರಕ್ಷಿಸುವ ವ್ಯವಸ್ಥೆ ಕಳ್ಳಕದೀಮರ ಜೋತೆ ಸೇರಿ ವ್ಯವಸ್ಥೆಯನ್ನು ಹದಗೆಡೆಸಿ ತಮ್ಮ ಸ್ವಾರ್ಥವನ್ನು ನೋಡಿಕೊಳ್ಳುವ ಸ್ಥಿತಿಯು ಸಮಾಜದಲ್ಲಿ ಬೇರೂರಿರುವುದನ್ನು ಕಂಡು ಮರುಗುತ್ತಾನೆ. ಅವರಿಂದನೇ ಏಟು ತಿಂದು ಹಣೆಯಿಂದ ರಕ್ತ ಭರಸಿಕೊಂಡು ಹೋಗುವಂತಹ ಸಂದರ್ಭ ಬಂದೊದಗುತ್ತದೆ.

ಈ ದೇಶದ ಬಡವರೆಲ್ಲರೂ ಸೇರಿ ಅನ್ಯಾಯ, ದಬ್ಬಾಳಿಕೆಯನ್ನು ವಿರೋಧಿಸಿ ನ್ಯಾಯ ಮತ್ತು ದೌರ್ಜನ್ಯ ಮುಕ್ತ ಸಮಾಜವನ್ನು ಕಟ್ಟುವ ಕನಸುಬೆಳೆಸಿಕೊಳ್ಳಬೇಕಾದ ಅಗತ್ಯವನ್ನು ಕಥೆಯು ಸಾರಿ ಹೇಳುತ್ತದೆ. ಈ ಅಸಹಾಯಕನ ಪರವಾಗಿ

ಹೋರಾಡಿದ ಸಿದ್ದರಾಮನಿಗೆ ಸಿಕ್ಕಿದ್ದು ದಾಂಡಿಗರ ಹೊಡೆತ, ನೋವು ಮತ್ತು ಯಾತನೆ. ಯಾರು ಕೇಳಬೇಕು ಇವರ ಅನ್ಯಾಯದ ಸ್ಥಿತಿಯನ್ನು. ಇದು ಕಥೆಯಲ್ಲಿ ಬರುವ ನಾಲ್ಕನೇ ದೃಶ್ಯ.

ಸಿನಿಮಾನೂ ಇಲ್ಲ, ಟಿಕೇಟೂ ಇಲ್ಲ. ಮರಳಿ ಊರಿಗೆ ಬರಬೇಕೆಂದು ರೆಲ್ವೆ ನಿಲ್ದಾಣಕ್ಕೆ ಬಂದರು. "ಟಿಕೇಟ್ ತೆಗೆಯಿಸುವುದಕ್ಕಾಗಿ ಜೇಬಿಗೆ ಕೈ ಹಾಕಿದ ಸಿದ್ದರಾಮ ಹಣದ ಸುಳಿವೇ ಇರಲಿಲ್ಲ"? ದುಡ್ಡು ಎಲ್ಲೋ ಕಳೆದು ಹೋಯಿತು. ಬಹಳ ಹೊಡೆದಾಟ ನಡೆದಿದ್ದಾಗ ಆ ಪೋಕರಿಗಳಲ್ಲಿ ಯಾರೋ ಹಾರಿಸಿರಬೇಕು" ಎಂದು ಬೇಸರದ ಧ್ವನಿಯಲ್ಲಿ ಗಿರೀಜಾಗೆ ಹೇಳಿದಾಗ, ಇನ್ನೇನು ಮಾಡುವುದು? ಮಾಡೋದೆನು ಬಂತು? ಉಪವಾಸ ಮಾಡೊದು. ಬೆಳಗ್ಗೆ ಬೇಗ ಎದ್ದು ಹದಿನೈದು ಮೈಲು ನಡೆದುಕೊಂಡು ಹೋಗೊದು" ಎಂದು ನೊಂದ ಧ್ವನಿಯಲ್ಲಿ ಹೇಳಿದಾಗ ಗಿರೀಜಾಗೆ ಬಹಳಷ್ಟು ಬೇಸರವಾಗುತ್ತದೆ. ಇದು ಸಿನಿಮಾದ ಕೊನೆಯ ದೃಶ್ಯವೆಂದು ಸಮಾಜವಾದದ ಸಿದ್ಧಾಂತದ ಹಿನ್ನೆಲೆಯಲ್ಲಿ ತತ್ವಗಳನ್ನು ಅಳವಡಿಸಿಕೊಂಡ ಸಿದ್ದರಾಮನು ತನ್ನ ಎಲ್ಲ ಕ್ಷೇತ್ರಗಳಲ್ಲಿ ಅಸಹಾಯಕನಾಗಿ ಬದಲಾಯಿಸಕ್ಕಾಗದೆ ಮಮ್ಮಲ ಮರುಗುತ್ತಾನೆ. ಪ್ರಗತಿಪರ ಕಾಲಘಟ್ಟಗಳಲ್ಲಿ ಮತ್ತು ಬಂಡವಾಳ ಶಾಹಿಗಳು, ಕಾರ್ಮಿಕರ ಮೇಲೆ ನಡೆಸುವ ದಬ್ಬಾಳಿಕೆ, ಕಾರ್ಮಿಕರ ಮಕ್ಕಳ ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರಗಳಿಂದ ವಂಚಿತರಾಗುವ ಚಿತ್ರಣ. ನಿವೃತ್ತಿಯ ನಂತರ ಕಾರ್ಮಿಕರು ಕಳ್ಳೇಕಾಯಿ ಮಾರುವ ಮುದುಕನ ಹಾಗೆ ಪೆನ್ಶನಗೆ ಪರದಾಡುವ, ನಿವೃತ್ತ ನೌಕರನ ಸಮಸ್ಯೆಯನ್ನು ಕಡೆಯು ಎಳೆಯಳೆಯಾಗಿ ಬಿಡಿಸುತ್ತ ಸಾಗುತ್ತದೆ.

ಅತ್ಯಂತ ಸೊಗಸಾಗಿ ಮೂಡಿ ಬಂದಿರುವ ಈ ಕಡೆಯು ಐದು ದೃಶ್ಯಗಳಲ್ಲಿ ಏನು ಅರಿಯದ ಮುಗ್ಧ ಗಿರೀಜಾಳಿಗೆ ಸಮಾಜದ ವಸ್ತು ಸ್ಥಿತಿಯನ್ನು ಪತಿ ಸಿದ್ದರಾಮನ ಮೂಲಕ ವಾಸ್ತವ ಸಮಾಜದ ದೃಶ್ಯಗಳಿಂದ ಅವಳಿಗೆ ಕಣ್ಣು ತೆರೆಸುತ್ತಾನೆ. ಮುಗ್ಧರಾದವರು ನಿಜ ಸಮಾಜದಲ್ಲಿ ಬಾಳಬೇಕಾದರೆ ಇಂಥ ಹಲವಾರು ತಂತ್ರಗಳನ್ನು ಏದುರಿಸಿ, ಕಷ್ಟದಿಂದ ಸುಖದ ಬಾಳನ್ನು ಕಟ್ಟಿಕೊಳ್ಳಬೇಕೆಂಬ ಸಂದೇಶವನ್ನು ಸಾರುತ್ತದೆ. ಕೇವಲ 1940ರ ಸುಮಾರಿಗೆ ಬರೆದ ಸಂದರ್ಭದ ಕಥೆಯಾದರು ಇಂದಿಗೂ 'ಗಿರೀಜಾ ಕಂಡ ಸಿನೆಮಾ'ದಂತಹ ಕಥೆಗಳು ಪ್ರಸ್ತುತವಾಗಿ ಬಿಡುತ್ತವೆ. ವ್ಯವಸ್ಥೆಯಲ್ಲಿ ಅಷ್ಟೊಂದು ಸುಧಾರಣೆಯನ್ನು ಇನ್ನೂ ಕಂಡಿಲ್ಲ. ಸುಮಾರು 80 ವರ್ಷಗಳ ಸ್ಥಿತಿಯೆ ಇನ್ನೂ ಸಮಾಜದಲ್ಲಿದೆ. ಬದಲಾವಣೆಯು ಪ್ರಗತಿಯಲ್ಲಿ ನಡೆಯಲಿಲ್ಲ. ಹಾಗಾಗಿ ಈ ಕಥೆಯು, ಸಂದೇಶವು ಇನ್ನೂ ಜೀವಂತವಾಗಿದೆ ಎನ್ನುವುದು ಅಲ್ಲಲ್ಲಿ ಗಮನಿಸಬಹುದಾಗಿದೆ.

ಪ್ರಗತಿಶೀಲ ಚಳುವಳಿಯ ರೂಪರೇಷೆಗಳು ಹಲವಾರು ಸಾಹಿತ್ಯ ಕೃತಿಗಳ ಮೂಲಕ ಮೂಡಿಬಂದವು. ಸಣ್ಣ ಕಥೆಗಳು ಅತ್ಯಂತ ಭರದಿಂದ ರಚನೆಯಾಗತೊಡಗಿದವು. ತಂತ್ರ, ಶೈಲಿ, ವಸ್ತುವೈವಿದ್ಯದ ಮೂಲಕ ಅದರ ವೇಗ ಕಾಣಿಸಿಕೊಂಡಿತು. ಈ ಜಾಗತೀಕ ಮಹಾವಿದ್ಯಮಾನದ ಪರಿಣಾಮದ ಕಾಲಘಟ್ಟದಲ್ಲಿ ಕಥೆಗಾರರ ಮನಸ್ಸು ಈ ಯುದ್ಧದ ಬೀಕರ ಪರಿಣಾಮವನ್ನು ಉಂಟುಮಾಡಿದವು. ದೇಶ–ವಿದೇಶಗಳ ಮಧ್ಯೆ ನಡೆಯುವ ಯುದ್ಧ ಒಂದು ಕಡೆಯಾದರ ಬದುಕಿಗಾಗಿ ಪ್ರತಿ ದಿನವು ಪ್ರತಿಯೊಬ್ಬ ಬಡವರು ಒಂದೊಂದು ಸಣ್ಣ ಸಣ್ಣ ಸಂಗ್ರಾಮವನ್ನು ಎದುರಿಸಬೇಕಾಗುತ್ತದೆ ಎನ್ನುವುದು ಲೇಖಕರ ಸಂದೇಶವಾಗಿದೆ. ಹೀಗಾಗಿ ಸಿದ್ದರಾಮನು ಹೆಂಡ್ತಿಗೆ ಒಂದೇ ಒಂದು ಸಿನೆಮಾ ತೋರಿಸುವಲ್ಲಿ ಹಲವು ವರ್ಷಗಳು ಗತಿಸಿದವು.ಅವನ ದೃಷ್ಟಿಯಲ್ಲಿ ಈ ಬದುಕೆ ಒಂದು ಸಿನಿಮಾ ಇದರಲ್ಲಿ ಪಾತ್ರವಹಿಸುವುದು ಮಾತ್ರ. ಭಾರತದ ಅಲ್ಲಾ ಬಡವರು ಎನ್ನುವ ವಾಸ್ತವದ ಅನುಭವದ ವಿಷಯವನ್ನು ಹೊರಹಾಕುತ್ತಾನೆ. ಮುಗ್ಧ ಗಿರೀಜಾಳಿಗೆ ಪ್ರತ್ಯೇಕ್ಷವಾಗಿ ಸಮಾಜದ ವಿವಿಧ ಸಂದರ್ಭಗಳಲ್ಲಿ ಸಾಮಾನ್ಯರು ಅನುಭವಿಸುವ ನೋವುಗಳ ಪರಿಚಯ ಮಾಡಿಸುತ್ತಾನೆ. ಪ್ರತಿ ದೃಶ್ಯಗಳು ಒಂದೊಂದು ಪಾಠವನ್ನು ಹೇಳಿಕೊಡುವ ಪಠ್ಯದಂತೆನೆ. ಕಲಿಯದಿದ್ದರು ಅವಳು ಇವುಗಳನ್ನು ನೊಡಿ, ಅರಿತುಕೊಂಡು ಅಸಾಯಕತೆ ನಿಮ್ಮ ಸುರು ಬಿಡುತ್ತಾಳೆ.ಈ ಉಸಿರೆ ಬಡವರಿಗೆ ಕಷ್ಟಗಳು ಎದುರಾದಾಗ ಸಹಾಯ ಮಾಡುವ ಸ್ನೇಹಿತ ಇದರ ಹೊರತಾಗಿ ಅವರ ಹತ್ತಿರವಿರುವುದಾದರು, ಮತ್ತೊಂದೇನು? ಎನ್ನುವಂತಿದೆ ಇವರ ಗೋಳು. ಹಾಗಾಗಿ ಈಗಲೂ ಈ ಕಥೆಯು ಪ್ರಸ್ತುತವಾಗಿ ಬಿಡುತ್ತದೆ. ನಿಟ್ಟುಸಿರಿನಿಂದ ಕೊನೆಯಗುವುದು ಯಾವಾಗ.